ಬೆಂಗಳೂರ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ನೋಟಿಸ್.

ಸ॥ 1896—97ನೇ ಇಸವಿಯಲ್ಲಿ ಇದರ ಕೆಳಗೆ ನಮೂದಿಸಲ್ಪಟ್ಟಿರುವ ಸಿಟಿ ಮ್ಯುನಿಸಿಪಲ್ ರೋಡುಗಳಲ್ಲಿ ದಳವಾಡಾ ಅಂದರೆ ಲ್ಯಾಟ್ರೈಲು, ಕಾಡುಜಲ್ಲಿ ಮತ್ತು ಗ್ರಾವಲ್ ಬಿಛಾವಣೆ ಕಾಂಗಾರಿಗಾಗಿ ದರಖಾಸ್ತು ಮಾಹೆ ಮಜಕೂರ 29ನೇ ತಾರೀಖು ಮಧ್ಯಾನ್ನದ ವರಿಗೂ ಇದರ ಕೆಳಗೆ ರುಜು ಮಾಡಿರುವವರಿಂದ ಅಂಗೀಕರಿಸಲ್ಪಡುತ್ತೆ. ದರಖಾಸ್ತು ಲಕೋಟೆಯಲ್ಲಿ ಯಿಟ್ಟು ಮೊಹರ್ ಮಾಡಿ ರವಾನಿಸಲ್ಪಡಬೇಕು.

ಅಂದಾಜುಗಳು, ಸ್ಪೆಸಿಫಿಕೇಷ್ಟಗಳು ಮತ್ತು ಇತರ ತಪ್ಶೀಲ್‌ಗಳು ಮ್ಯುನಿಸಿಪಲ್ ಯಗ್ಜಿಕ್ಯೂಟಿವ್ ಇಂಜನೀರ್ ಆಫಿಸಿನಲ್ಲಿ ಪ್ರತಿ ದಿವಸದಲ್ಲಿಯೂ ಆದಿತ್ಯವಾರಗಳು ಹೊರ್ತು ಹಗಲು 11 ಘಂಟೆ ಲಾಗಾಯತು 5 ಘಂಟೆ ವರಿಗೂ ನೋಡಲ್ಪಡಬಹುದು.

ರಸ್ತೆಗಳ ಹೆಸರು.	ಲ್ಯಾಟ್ರೈಲು ಬಿಛಾವಣೆ ಸುಮಾರು ಸಲೆಗಜ.	ಕಾಡುಜಲ್ಲಿ ಬಿಛಾವಣೆ ಸುಮಾರು ಸಲೆಗಜ.	ಗ್ರಾವಲ್ ಬಿಛಾವಣೆ ಸುಮಾರು ಸಲೆಗಜ.
ಲಾಲ್‌ಬಾಗ್ ರಸ್ತೆ	110	..	49
ಮಿರ್ಜ ರಸ್ತೆ	110	..	49
ಧರ್ಮಾಂಬುಧಿ ಟ್ಯಾಂಕ್‌ಬಂಡು ರಸ್ತೆ	..	440	183
ತಾಲ್ಲೂಕು ಕಛೇರಿ ರಸ್ತೆ	..	367	171
ಅಕ್ಕಿಪೇಟೆ ರಸ್ತೆ	..	184	86
ಶ್ರೀನಿವಾಸಾಚಾರ್ರು ರಸ್ತೆ	..	132	85
ಹೊಸ ತಿಗಳರಪೇಟೆ ರಸ್ತೆ	..	293	137
ಹೊಸ ಗುಟ್ಟಹಳ್ಳಿ ರಸ್ತೆ	..	779	364
ಬಳ್ಳಾರಿ ರಸ್ತೆ	660	..	293
ಮಿಲರ್ ರಸ್ತೆ	...	330	146
ರೇಸ್ ಕೋಸ್ ರಸ್ತೆ	..	495	220
ಹೊಸಕೋಟೆ ರಸ್ತೆ	..	184	86
ಅಗ್ರಹಾರಂ ಟ್ಯಾಂಕ್‌ಬಂಡು ರಸ್ತೆ	..	733	342
ಹೊಸೂರ್ ರಸ್ತೆ	..	275	128
ಮೈಸೂರ್ ರಸ್ತೆ	..	642	299
ಕಾನಕಾನಹಳ್ಳಿ ರಸ್ತೆ	..	92	43
ಗವೀಪುರದ ರಸ್ತೆ	..	..	733
ದೊಡ್ಡಬನವಂಣನಗುಡಿ ರಸ್ತೆ	..	..	733

ತಾರೀಖು 16ನೇ ಜೂ॥ 1896ನೇ ಇಸವಿ.

ಬೆಂಗಳೂರು ಸಿಟಿ ಸರಹದ್ದಿನಲ್ಲಿ ಸ॥ 1896—97ನೇ ಇಸವಿ ಸಾಲಿನಲ್ಲಿ ಆಗಾಗ್ಯೆ ಅವಶ್ಯಕವಾಗಿ ನಡಿಯಲ್ಪಡುವ ಪ್ರತಿ ವಂದು ಕಾಂಗಾರಿ 50 ರೂಪಾಯಿ ಅಥವಾ 50 ರೂಪಾಯಿಗಳಿಗೆ ಕಮ್ಮಿ ಕಿಮ್ಮತ್ತುಳುಳ್ಳ ಯಲ್ಲಾ ಹರ್‌ಬಾಬೂ ಚಿಲ್ಲರೇ ಕಾಂಗಾರಿಗಳಂದರೆ, ರಸ್ತೆ ಕಾಂಗಾರೀ ವಿನಹ, ಕಟ್ಟಡಗಳ ರಿಪೇರಿ, ಚಪ್ಪಡಿಗಳಿಂದ ಜರಂಡಿ ಕಟ್ಟುವದು, ರಿಪೇರಿ ಮಾಡುವದು ರೈಲಿಂಗ್‌ಸ್ ರಿಪೇರೀ ಮಾಡುವದು ಮೊಹರಿಗಳನ್ನು ಕಟ್ಟುವದು ರಿಪೇರಿ ಮಾಡುವದು ಭೂವಿಗಳನ್ನು ರಿಪೇರೀ ಮಾಡುವದು ವಗೈರೇಗಳಿಗೆ ಸ॥ 1896ನೇ ಇಸವಿ ಜುಲೈ 4ನೇ ತಾರೀಖು ಮಧ್ಯಾನ್ನದ ವರಿಗೂ ಇದರ ಕೆಳಗೆ ರುಜು ಮಾಡಿರುವವರಿಂದ ದರಖಾಸ್ತುಗಳು ಅಂಗೀಕರಿಸಲ್ಪಡುತ್ತವೆ.

2. ಪ್ರತಿ ರೇಂಜ್ ಅಥವಾ ಸಬ್ ವೋವರ್‌ಸಿಯರ್ ಛಾರ್ಜಿನಲ್ಲಿ ಸಾಲ್ ಪೂರ್ತಿನಡೆಯಲ್ಪಡುವ ಕಾಂಗಾರಿಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದರಖಾಸ್ತುಗಳು ರವಾನಿಸಲ್ಪಡಬೇಕು. ಯಾವ ದರಗಳಲ್ಲಿ ಕಾಂಗಾರೀ ಮಾಡಲು ಇಷ್ಟ ವಿಧಿಯೋ ಆ ದರಗಳು ದರಖಾಸ್ತಿನಲ್ಲಿ ನಮೂದಿಸಬೇಕು.

3. ಮೇಲೆ ಉದಹರಿಸಿದ ಕಾಂಗಾರಿಗಳು ನಡಿಸಲು ಹುಕುಂ ಕೊಟ್ಟ ವಡನೆ ಅವುಗಳನ್ನು ಪೂರೈಮಾಡಿ ಪ್ರಸಿಡೆಂಟ್ ಅಥವಾ ಯಗ್ಜಿಕ್ಯೂಟಿವ್ ಇಂಜಿನೀಯರ್ ಯವರಿಗೆ ತೃಪ್ತಿಕರವಾಗುವ ಹಾಗೆ ಅತಿತ್ವರ್ಯದಲ್ಲಿ ಅವುಗಳನ್ನು ಪೂರೈಸಬೇಕು.

4. ಕಮ್ಮಿ ದರಖಾಸ್ತು ಅಥವಾ ಯಾವ ದರಖಾಸ್ತನ್ನೇ ಆಗಲಿ ಪ್ರಸಿಡೆಂಟರವರು ಅಂಗೀಕರಿಸಲು ಬದ್ಧರಾಗುವದಿಲ್ಲಾ ಅಥವಾ ಯಾವ ನಿರಾಕರಿಸಲ್ಪಟ್ಟ ದರಖಾಸ್ತಿಗೆ ಆಗಲಿ ಕಾರಣಗಳನ್ನು ಹೇಳಲು ಬದ್ಧರಾಗಿರುವದಿಲ್ಲಾ.

ಬೆಂಗಳೂರು,
ತಾರೀಖು 17ನೇ ಜೂ॥ 1896.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.